ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 259/2022

(ಪ್ರಾಸಾ-11 ಚಾಸಾ-37)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 20.12.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಜಗದೀಶ್ ಎಸ್ ಆರ್ |
| ತಂದೆಯ ಹೆಸರು | - | ರಾಮಯ್ಯ |
| ವಯಸ್ಸು | - | 44 ವರ್ಷ, |
| ಉದ್ಯೋಗ | - | ಪೋಲಿಸ್ ಇನ್ಸಪೆಕ್ಟರ್, ಸೈಬರ್‌ಕ್ರೈಂ, ಕೋಲಾರ |
| ವಾಸ | - | ಕೋಲಾರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಅಕ್ಟೋಬರ್ 2021 ರಿಂದ ಜನವರಿ 2023 ರವರೆಗೆ ಹೆಬ್ಬಗೋಡಿ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಇನ್ಸಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದೆನು. ದಿನಾಂಕ 18.01.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12.00 ಘಂಟೆ ಸಮಯದಲ್ಲಿ ಚಾಸಾ-1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 23/2022 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೊಂದಾಯಿಸಿರುತ್ತೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರು ಈಗಾಗಲೇ ನಿಪಿ-15 ಎಂದು ಗುರ್ತಿಸಲಾಗಿದ್ದು, ನಿಪಿ-15 ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-15(ಬಿ) ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪ್ರ.ವ.ವರದಿಯನ್ನು ನಿಪಿ-20 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-20(ಎ) ಎಂದು ಗುರ್ತಿಸಲಾಯಿತು. ದೂರು ಮತ್ತು ಪ್ರ.ವ.ವರದಿಯನ್ನು ಠಾಣಾ ಸಿಬ್ಬಂದಿಯ ಮುಖಾಂತರ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು ಪ್ರತಿಗಳನ್ನು ಹಿರಿಯ ಅಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ.

2. ನಂತರ ಅದೇ ದಿನ ಕೃತ್ಯ ನಡೆದ ಸ್ಥಳವಾದ ಆನೇಕಲ್ ತಾಃ ಜಿಗಣಿ ಹೋಬಳಿ ಹುಲಿಮಂಗಳ ಗ್ರಾಮದ ಸರ್ವೆ ನಂಬರ್ 350ರ ಸರ್ಕಾರಿ ಗೋಮಾಳದ ಕಲ್ಲು ಬಂಡೆಯ ಒಳಗಡೆ ಭೇಟಿ ನೀಡಿ ಚಾಸಾ-1 ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 01.30ರಿಂದ 03.00ವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸ್ಥಳದಲ್ಲಿ ಒಂದು ಅಪರಿಚಿತ ಗಂಡಸಿನ ಶವ ಇದ್ದು ಅದು ಅರ್ಧ ಸುಟ್ಟ ಗಂಡಸಿನ ಶವವಾಗಿತ್ತು. ಸದರಿ ಪಂಚನಾಮೆ ಸಮಯದಲ್ಲಿ ಎಫ್ ಎಸ್ ಎಲ್ ಅಧಿಕಾರಿಗಳು ಸಹ ಸ್ಥಳಕ್ಕೆ ಬಂದಿದ್ದು ಅವರು ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಶವದ ತಲೆಯ ಹತ್ತಿರ ಸುಟ್ಟ ಬೂದಿ, ಶವದ ಎಡಗೈ ಬಳಿ ಇದ್ದ ಒಂದು ಬಟ್ಟೆ, ಶವದ ಅಂಡರ್ ವೇರ್, ಸಾದಾ ಮಣ್ಣು, ಶವದ ಕೆಳಗೆ ಇದ್ದ ಮಾದರಿ ಮಣ್ಣು, ಶವದ ಹತ್ತಿರ ಇದ್ದ ರಕ್ತದ ಕಲೆ, ಮೃತದೇಹದ ಹತ್ತಿರ ಬಿದ್ದಂತಹ ಭಾಗಶಃ ಸುಟ್ಟಂತಹ ಬಟ್ಟೆ ತುಣುಕು ಪೀಸುಗಳು, ಸಾದಾ ಸ್ಯಾಂಪಲ್ ಹತ್ತಿ , ಮೃತದೇಹದ ಕತ್ತಿನ ಬಳಿ ಇದ್ದ ಹಸಿರು, ನೀಲಿ, ಕೆಂಪು, ಹಳದಿ, ಕೇಸರಿ, ಪಿಂಕ್ ಬಣ್ಣದ ಸುಟ್ಟಿರುವ ಬಟ್ಟೆ ಚೂರುಗಳು, ಒಂದು ಗಂಡಸಿನ ಬಲಗಾಲಿನ NOGAEINAT ಎಂಬ ಹೆಸರಿದ್ದ ಶೂ, ಶೂ ಒಳಗೆ ಇದ್ದ ಎಂ ಎಂದು ಬರೆದಿರುವ ಒಂದು ಸಾಕ್ಸ್, ಒಂದು ಎಡಗಾಲಿನ ಸುಟ್ಟು ಹೋಗಿರುವ ಶೂ ನ ಮುಂಭಾಗದ ಚೂರು, ಒಂದು ಕಾಡು ಜಾತಿಗೆ ಸೇರಿದ 13 ಇಂಚಿನ ಒಂದು ಮುಕ್ಕಾಲು ಸುತ್ತಳತೆ ಇದ್ದ ಅಲ್ಲಲ್ಲಿ ರಕ್ತಕಲೆಯಾಗಿದ್ದ ಸೀಳಿದಂತೆ ಇರುವ ಮರುದ ತುಂಡು, ಒಂದು ಕಾಡು ಜಾತಿಗೆ ಸೇರಿದ 28 ಇಂಚಿನ ಮೂರವರೆ ಇಂಚು ಸುತ್ತಳತೆ ಇದ್ದ ಅಲ್ಲಲ್ಲಿ ರಕ್ತಕಲೆಯಾಗಿದ್ದ ದೊಣ್ಣೆಯನ್ನು ಸಂಗ್ರಹಿಸಿ ಹಾಜರುಪಡಿಸಿದ್ದನ್ನು ನಾನು ಸ್ಥಳದಲ್ಲಿ ಅವುಗಳನ್ನು ಪ್ಯಾಕ್ ಮತ್ತು ಹೆಚ್ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತುಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ನಿಪಿ-7ರಂತೆ ಮೃತದೇಹದ ಭಾವಚಿತ್ರವನ್ನು ತೆಗೆದಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆ ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ನಾನು ಅಮಾನತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಠಾಣೆಗೆ ಹಿಂತಿರುಗಿ ಪಿಎಫ್ ನಂ.12/2022ರಲ್ಲಿ ಮಾಲುಗಳನ್ನು ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಮು.ಮಾ-

1 ರಿಂದ 14 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

3. ನಂತರ ಮೃತದೇಹವನ್ನು ಅತ್ತಿಬೆಲೆ ಆಕ್ಸಫರ್ಡ್ ಮೆಡಿಕಲ್ ಕಾಲೇಜಿಗೆ ಸ್ಥಳಾಂತರಿಸಲಾಗಿದೆ. ದಿಃ19.01.2022 ರಂದು ಚಾಸಾ-11 ಮತ್ತು 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-11 ಮತ್ತು 12 ಇವರು ನಿಪಿ-12 ಮತ್ತು 13 ರಂತೆ ಹೇಳಿಕೆ ನೀಡಿರುತ್ತಾರೆ. ಚಾಸಾ-11 ಮತ್ತು 12 ಇವರು ಮೃತದೇಹವನ್ನು ನೋಡಿ ಗುರುತಿಸಿ ಮೃತನ ಹೆಸರು ಸಾಗರ್, ವಿಳಾಸ ಹುಣಸಗೇರಾ ಗ್ರಾಮ, ಹುಮನಾಬಾದ್ ತಾಃ, ಬೀದರ್ ಜಿಲ್ಲೆ, ಆತ ಬೊಮ್ಮಸಂದ್ರ ಕೈಗಾರಿಕ ವಲಯದಲ್ಲಿ ಇರುವ ಮಹೀಂದ್ರಾ ಮೊಬಿಲಿಟಿ ಎಂಬ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಿಕೆ ನೀಡಿರುತ್ತಾರೆ.

4. ದಿಃ20.01.2020 ರಂದು ಮೃತನ ತಂದೆ ಚಾಸಾ-7 ಇವರು ಠಾಣೆಗೆ ಹಾಜರಾಗಿ ಮೃತನ ಫೋಟೋ ಹಾಗೂ ಶೂ ವನ್ನು ನೋಡಿ ಗುರುತಿಸಿ ಸದರಿ ಮೃತ ದೇಹ ತನ್ನ ಮಗನದ್ದು ಎಂದು ಗುರುತಿಸಿರುತ್ತಾರೆ. ನಂತರ ಅದೇ ದಿನ ಶವ ಪಂಚನಾಮೆ ಮಾಡುವ ಸಲುವಾಗಿ ಅತ್ತಿಬೆಲೆ ಆಕ್ಸಫರ್ಡ್ ಮೆಡಿಕಲ್ ಕಾಲೇಜಿಗೆ ಭೇಟಿ ಮಾಡಿದ್ದು ಪಂಚರಾದ ಚಾಸಾ-4 ರಿಂದ 6 ರವರ ಸಮಕ್ಷಮ ಬೆಳಗ್ಗೆ 08.30 ರಿಂದ 11.00 ಘಂಟೆಯವರೆಗೆ ನಿಪಿ-14 ರಂತೆ ಶವ ತನಿಖೆ ಮಾಡಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಚಾಸಾ-7 ರಿಂದ 10 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಶವ ಪಂಚನಾಮೆಯ ನಂತರ ಶವ ಪರೀಕ್ಷೆಗಾಗಿ ಚಾಸಾ-31 ರವರ ಮೂಲಕ ಚಾಸಾ-29 ವೈದ್ಯರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-31 ರವರ ಹೇಳಿಕೆ ಪಡೆದಿರುತ್ತೇನೆ.

5. ದಿಃ21.01.2022 ರಂದು ಪ್ರಕರಣದಲ್ಲಿ ಈಗಾಗಾಲೇ ನೇಮಿಸಿರುವ ಚಾಸಾ-33 ಮತ್ತು ಪ್ರಸಾದ್ ಸಿಬ್ಬಂದಿ ಇವರು 1 ನೇ ಆರೋಪಿಯನ್ನು ಪತ್ತೆ ಮಾಡಿ ಸಂಜೆ 04.15 ಘಂಟೆಗೆ ಠಾಣೆಯಲ್ಲಿ ನನ್ನ ಮುಂದೆ ಹಾಜರುಪಡಿಸಿ ಸದರಿ ಆರೋಪಿಯನ್ನು ದಸ್ತಗಿರಿ

ಮಾಡಿ ವಿಚಾರಣೆ ಮಾಡಿ ಸ್ವ ಇಚ್ಛಾ ಹೇಳಿಕೆ ದಾಖಲಿಸಿರುತ್ತೇನೆ.

6. 1 ನೇ ಆರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯನ್ನು "ನನ್ನನ್ನು ಕರೆದುಕೊಂಡು ಹೋದರೆ ಮೃತ ಸಾಗರ್ ನ ಮೊಬೈಲ್ ಅನ್ನು ತನ್ನ ಮನೆಯಲ್ಲಿ ಇಟ್ಟಿದ್ದು ಎತ್ತಿ ಕೊಡುವುದಾಗಿ" ಹೇಳಿಕೆ ನೀಡಿರುತ್ತಾರೆ. 1 ನೇ ಹೇಳಿಕೆಯ ಸ್ವ ಇಚ್ಛಾ ಹೇಳಿಕೆಯ ಸಂಬಂಧಪಟ್ಟ ಭಾಗವನ್ನು ನಿಪಿ-21 ಎಂದು ಸಾಕ್ಷಿ ಸಹಿಯನ್ನು 21(ಎ) ಮತ್ತು 1 ನೇ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-21(ಬಿ) ಎಂದು ಗುರುತಿಸಲಾಯಿತು. ಹೆಚ್ ಸಿ 260 ಹೆಚ್ ಎಸ್ ಪ್ರಸಾದ್ ಇವರು ನೀಡಿರುವ ವರದಿಯನ್ನು ನಾನು ಈಗ ನೊಡುತ್ತಿದ್ದು ನಿಪಿ-22 ಎಂದು ಸಾಕ್ಷಿ ಸಹಿಯನ್ನು 22(ಎ) ಎಂದು ಗುರುತಿಸಲಾಯಿತು.

7. ಅದೇ ದಿನ ಚಾಸಾ-2 ರವರಿಂದ ನಿಪಿ-7 ಫೋಟೋ ತೆಗೆದ ಬಗ್ಗೆ ಕಲಂ 65-ಬಿ ಅಡಿಯ ಪ್ರಮಾಣ ಪತ್ರವನ್ನು ನಿಪಿ-9 ರಂತೆ ಪ್ರಮಾಣ ಪತ್ರ ಪಡೆದಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-13 ಮತ್ತು 33 ರವರ ಹೇಳಿಕೆಗಳನ್ನು ಪಡೆದರುತ್ತೇನೆ. ನಿಪಿ-13 ಇವರು ನಿಪಿ-11 ರಂತೆ ಹೇಳಿಕೆ ನೀಡಿರುತ್ತಾರೆ.

8. 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯಲ್ಲಿ ಮೃತನನ್ನು 1 ರಿಂದ 3 ನೇ ಆರೋಪಿತರು ಕೊಲೆ ಮಾಡಲು ತಮ್ಮ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋದ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರ ಮೇರೆಗೆ 1 ನೇ ಆರೋಪಿಯು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ನಾಟ್ಸನ್ ಕಂಪನಿ ಮುಂಭಾಗಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ-13 ರಿಂದ 15 ರವರಿಗೆ ನೋಟೀಸ್ ನೀಡಿ ಅವರ ಸಮಕ್ಷಮ ಸಂಜೆ 5.15 ರಿಂದ 06.00 ಘಂಟೆಯವರೆಗೆ ನಿಪಿ-10 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ನೋಟೀಸನ್ನು ನಿಪಿ-23 ಎಂದು ಸಾಕ್ಷಿ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

9. ನಂತರ 1 ನೇ ಆರೋಪಿಯು ಲಿಂಗಾಯಿತ ಜಾತಿಗೆ ಸೇರಿದವನಾಗಿದ್ದು ಮೃತ ಸಾಗರ್ ಪರಿಶಿಷ್ಟ ಜಾತಿಗೆ ಸೇರಿದವನಾದ ಕಾರಣ ಸದರಿ ಪ್ರಕರಣದಲ್ಲಿ ಎಸ್ ಸಿ ಎಸ್ ಟಿ ಕಾಯ್ದೆ ಅಡಿ ಸೆಕ್ಷನ್ ಗಳನ್ನು ಅಳವಡಿಸಿ ತನಿಖೆ ಮುಂದುವರಿಸಲು ಅದೇ ದಿನ ಮಾನ್ಯ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿ ಅನುಮತಿ ಪಡೆದು ನಂತರ ಪ್ರಕರಣದ ಕಡತವನ್ನು ಚಾಸಾ-38 ರವರಿಗೆ ವಹಿಸಿಕೊಟ್ಟಿರುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿದ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

10. ನಂತರ ನಾನು ಅದೇ ಠಾಣೆಯ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವ ವೇಳೆ ದಿಃ28.04.2022 ರಂದು ಹಾಗೂ ದಿಃ3.11.2022 ರಂದು ಎಫ್ ಎಸ್ ಎಲ್ ವರದಿಗಳನ್ನು ಕವರಿಂಗ್ ಲೆಟರ್ ನೊಂದಿಗೆ ಸ್ವೀಕರಿಸಿದ್ದು ಅವುಗಳನ್ನು ಕಡತದಲ್ಲಿ ಅಳವಡಿಸಿಕೊಳ್ಳುವಂತೆ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಸಾಕ್ಷಿ ದಿಃ28.04.2022 ರ ಕವರಿಂಗ್ ಲೆಟರ್ ನಿಪಿ-24 ಎಂದು ಸಾಕ್ಷಿ ಸಹಿಯನ್ನು ನಿಪಿ-24(ಎ) ಎಂದು ಎಫ್ ಎಸ್ ಎಲ್ ವರದಿಯನ್ನು ನಿಪಿ-25 ಎಂದು ಗುರುತಿಸಲಾಯಿತು.
ಸಾಕ್ಷಿ ದಿಃ03.11.2022 ರ ಕವರಿಂಗ್ ಲೆಟರ್ ನಿಪಿ-26 ಎಂದು ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಮೂರು ಎಫ್ ಎಸ್ ಎಲ್ ವರದಿಗಳನ್ನು ನಿಪಿ-27 ರಿಂದ 29 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು